# 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು

## ಸಿ.ಸಿ. ನಂ. 1108/2023

| | | |
|---|---|---|
| ಹೆಸರುಃ | ವೆಂಕಟೇಶ್ ಜಿ.ಆರ್ | ಚಾಸಾ-6 ಪ್ರಾಸಾ-2 |
| ತಂದೆಯ ಹೆಸರುಃ | ರಾಮಚಂದ್ರಪ್ಪ ಜಿ.ವಿ | ಸಾಕ್ಷ್ಯವನ್ನು ದಿಃ 09.07.2026 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 43 ವರ್ಷ | |
| ಉದ್ಯೋಗಃ | ಹೆಚ್.ಸಿ-83 | |
| ವಾಸಸ್ಥಳಃ | ಕೋಲಾರ | |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನಾನು 2023 ರಿಂದ ಇಂದಿನವರೆಗೆ ಮಾಲೂರಿನಲ್ಲಿ 112 ತುರ್ತು ಸ್ಪಂದನದಲ್ಲಿ ಚಾಲಕನಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಆರೋಪಿ 1 ರಿಂದ 9 ರವರನ್ನು ನೋಡಿದರೆ ನಾನು ಗುರುತಿಸುತ್ತೇನೆ. ದಿಃ 16.09.2023 ರಂದು ರಾತ್ರಿ 8.00 ರಿಂದ ಬೆಳಗ್ಗೆ 8.00 ರವರೆಗೆ ಕರ್ತವ್ಯ ನಿರ್ವಹಿಸುತ್ತಿರುವಾಗ ಸುಮಾರು ರಾತ್ರಿ 9.07 ಕ್ಕೆ ಶಾಂತಮ್ಮ ಚನ್ನಕಲ್ ಗ್ರಾಮದವರು ಗಲಾಟೆಯಾಗಿದೆ, ಬನ್ನಿ ಎಂದು ದೂರವಾಣಿ ಕರೆ ಮಾಡಿರುತ್ತಾರೆ. ನಾವು 9.20 ಸಮಯಕ್ಕೆ ಚನ್ನಕಲ್ ಗ್ರಾಮಕ್ಕೆ ತಲುಪಿದ್ದು, ಅಷ್ಟರಲ್ಲಿ ಮಾಲೂರು ಪೊಲೀಸ್ ಠಾಣೆಯ ಚಾಸಾ.7 ಹಾಗೂ ಚಾಸಾ.8 ರವರು ಆ ಸ್ಥಳದಲ್ಲಿ ಹಾಜರಿದ್ದು, ನಾವು ಹೋಗುವಷ್ಟರಲ್ಲಿ 1 ನೇ ಆರೋಪಿ ನೀವು ಇಲ್ಲಿಗೆ ಏತಕ್ಕೆ ಬಂದಿದ್ದೀರಿ, ಬೋಳಿ ಮಕ್ಕಳಾ ಎಂದು ಅವಾಚ್ಯ ಶಬ್ದಗಳಿಂದ ಬೈದು, ಕೂಗಾಡಿರುತ್ತಾರೆ. ನಾವು ಅವರುಗಳನ್ನು ಸಮಾಧಾನ ಮಾಡಿರುತ್ತೇವೆ. ನಂತರ ಸುಮಾರು 10.06 ಸಮಯಕ್ಕೆ ಪುರಸನಹಳ್ಳಿ ಗ್ರಾಮದಲ್ಲಿ ಗಲಾಟೆಯಾಗಿದೆ ಎಂದು 112 ಗೆ ಕರೆ ಬಂದಿದ್ದು, ಚಾಸಾ.1 ರವರ ಜೊತೆ ಹೋಗಲು ತಯಾರಿದ್ದು, ಅಷ್ಟರಲ್ಲಿ 1 ರಿಂದ 9 ಜನ ಆರೋಪಿಗಳು ಜೀಪಿಗೆ ಅಡ್ಡ ಹಾಕಿ, ತೊಂದರೆಯನ್ನು ಮಾಡಿರುತ್ತಾರೆ. ಆಗ ಚಾಸಾ.4, ಚಾಸಾ.5,

ಚಾಸಾ.7 ಮತ್ತು ಚಾಸಾ.8 ರವರು ನಮ್ಮ ಜೀಪಿಗೆ ದಾರಿಯನ್ನು ಮಾಡಿಕೊಟ್ಟಿರುತ್ತಾರೆ. ತದನಂತರ ನಾವು ಪುರಸನಹಳ್ಳಿಗೆ ಹೋಗಿರುತ್ತೇವೆ. ಈ ಎಲ್ಲಾ ವಿಚಾರವನ್ನು ನಾನು ಪೊಲೀಸರ ಮುಂದೆ ಹೇಳಿರುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಎನ್ ವಕೀಲರಿಂದಃ**

ನಾನು 112 ನಲ್ಲಿ ತಿಂಗಳಿಗೆ ಒಂದು ತಾಲ್ಲೂಕಿನ ಹಾಗೆ ಕರ್ತವ್ಯ ನಿರ್ವಹಿಸುತ್ತೇನೆ. ನಾನು ಘಟನೆಯಾದ ತಿಂಗಳಿನಲ್ಲಿ ಮಾಲೂರಿನಲ್ಲಿ ಕರ್ತವ್ಯ ನಿರ್ವಹಿಸಿದ್ದೇನೆ ಎಂಬ ಬಾಬ್ತು ನ್ಯಾಯಾಲಯಕ್ಕೆ ಯಾವುದೇ ದಾಖಲೆ ಸಲ್ಲಿಸಿಲ್ಲ. ನಾನು ಕರ್ತವ್ಯಕ್ಕೆ ರಾತ್ರಿ 7.50 ಗಂಟೆಗೆ ಬರುತ್ತೇನೆ. ಸದರಿ ಘಟನೆ ನಡೆಯುವುದಕ್ಕಿಂತ ಮುಂಚೆ ಘಟನೆ ನಡೆಯುವ ದಿನ ನಾವು ಬೇರೆ ಯಾವುದೇ ಜಾಗಕ್ಕೂ ಹೋಗಿರುವುದಿಲ್ಲ. ಘಟನೆ ನಡೆದ ದಿನ 112 ಗೆ ಕರೆ ಬಂದಾಗ ನಾನು ಮಾಲೂರು ನಗರದಲ್ಲಿದ್ದು, ನಿರ್ದಿಷ್ಟವಾಗಿ ಎಲ್ಲಿದ್ದೆವು ಎಂಬ ಬಗ್ಗೆ ನನಗೆ ನೆನಪಿಲ್ಲ.

ಮಾಲೂರಿನಿಂದ ಚನ್ನಕಲ್ಗೆ ಹೋಗುವಾಗ ಸುಮಾರು ರಾತ್ರಿ 9.07 ಸಮಯ ಆಗಿರುತ್ತದೆ. ನಾವು ತಲುಪುವಾಗ ಸುಮಾರು ರಾತ್ರಿ 9.20 ಸಮಯ ಆಗಿರುತ್ತದೆ. ನಾವು ಘಟನೆ ನಡೆದ ದಿನದಂದು ಪೊಲೀಸ್ ಠಾಣೆಗೆ ಮಾಹಿತಿ ನೀಡಿ ನಂತರ ಘಟನಾ ಸ್ಥಳಕ್ಕೆ ಹೋಗಿರುತ್ತೇವೆ. ಮಾಲೂರು ನಗರದಿಂದ ಚನ್ನಕಲ್ಗೆ 10 ಕಿ.ಮೀ ಅಂತರ ಇರುತ್ತದೆ. ಚನ್ನಕಲ್ ಮಾಸ್ತಿಯಲ್ಲಿ ಬರುತ್ತದೆ. ಘಟನೆ ನಡೆದ ಸ್ಥಳದಲ್ಲಿ ಸುಮಾರು 30 ರಿಂದ 40 ಜನ ಸೇರಿರುತ್ತಾರೆ.

ಚಾಸಾ.7 ಹಾಗೂ 8 ರವರು ನಮ್ಮ ಮಾಹಿತಿಯ ಮೇರೆಗೆ ಬಂದಿರುತ್ತಾರೋ ಇಲ್ಲವೋ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ನಾವು ಹೋಗುವ ಸಮಯದಲ್ಲಿ ಚಾಸಾ.7 ಹಾಗೂ 8 ರವರು ಗಲಾಟೆಯನ್ನು ತಡೆದಿದ್ದರು. ನಾವು ಹೋಗಿ ತಲುಪಿದ ಕೂಡಲೇ 1ನೇ ಆರೋಪಿ ಅವಾಚ್ಯ ಶಬ್ದಗಳಿಂದ ನಮ್ಮನ್ನು ಬೈದಿರುತ್ತಾರೆ. ಗಲಾಟೆ ನಡೆಯುವ ಸಮಯಕ್ಕೆ ಸೇರಿರುವ 30 ರಿಂದ 40 ಜನರ ಮಾಹಿತಿ ನನಗಿಲ್ಲ. 112 ಗೆ ಬಂದ ದೂರಿನ ಆಧಾರದ ಮೇರೆಗೆ ಘಟನೆಯ ಸಮಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಘಟನೆಯ ದಿನದಂದು 1 ರಿಂದ 9 ಜನ ಆರೋಪಿತರು ಯಾವ

ರೀತಿಯಲ್ಲಿ ಅಡ್ಡಪಡಿಸಿದರು ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. 9 ನೇ ಆರೋಪಿತರು ಹೊಸಕೋಟೆ ತಾಲ್ಲೂಕಿನ ಭಕ್ತರಹಳ್ಳಿ ಗ್ರಾಮದವರು ಎಂದರೆ ಸರಿ. 1 ನೇ ಆರೋಪಿ ಮಾಲೂರಿನ ವಾಸಿ ಎಂದರೆ ಸರಿ.

ಅಡ್ಡಪಡಿಸಿದ ವಾಹನವನ್ನು ಚಾಸಾ.1, 7 ಹಾಗೂ 8 ರವರು ಸರಿಪಡಿಸಿ ಹೋಗಲು ವ್ಯವಸ್ಥೆ ಮಾಡಿರುತ್ತಾರೆ. ನಾನು ಒಬ್ಬನೇ ದಿಃ 17.09.2023 ರಂದು ಮದ್ಯಾಹ್ನ ಸುಮಾರು 12.00 ಗಂಟೆ ಸಮಯಕ್ಕೆ ಪೊಲೀಸರಿಗೆ ಹೇಳಿಕೆಯನ್ನು ನೀಡಿರುತ್ತೇನೆ. ಚಾಸಾ.1 ರವರು ದೂರನ್ನು ಸಲ್ಲಿಸುವ ಕಾಲದಲ್ಲಿ ನಾನು ಅವರ ಜೊತೆ ಇರಲಿಲ್ಲ. ಯಾವುದೇ ಘಟನೆಯೂ ನಡೆಯದಿದ್ದರೂ ಚಾಸಾ.4 ರವರಿಗೆ ಆರೋಪಿ 1 ರಿಂದ 9 ರವರ ವಿರುದ್ದ ಇರುವ ಸಿವಿಲ್ ದಾವೆಯ ವಿಷಯ ತಿಳಿದು ಚಾಸಾ.4 ರವರಿಗೆ ಸಹಾಯ ಮಾಡುವ ಉದ್ದೇಶದಿಂದ, ಸುಳ್ಳು ದೂರನ್ನು ಸಲ್ಲಿಸಿ ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಚಾಸಾ.1 ಹಾಗೂ ಚಾಸಾ.7 ರವರು 1 ರಿಂದ 9 ನೇ ಆರೋಪಿ ರವರ ಹೆಸರನ್ನು ನನಗೆ ತಿಳಿಸಿರುತ್ತಾರೆ. ಘಟನೆ ನಡೆದ ಸ್ಥಳಕ್ಕೆ ಹೋಗದೇ, ನಮ್ಮ ಕರ್ತವ್ಯಕ್ಕೆ ಯಾವುದೇ ರೀತಿಯ ಅಡ್ಡಿಯಾಗದಿದ್ದರೂ ಸುಳ್ಳು ಪಿರ್ಯಾದನ್ನು ನೀಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ. 4 ರವರ ಮಾತನ್ನು ಕೇಳಿಕೊಂಡು ಆರೋಪಿತರಿಗೆ ತೊಂದರೆ ಕೊಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೀರ ಎಂದರೆ ಸರಿಯಲ್ಲ.

**<u>ಮರು ವಿಚಾರಣೆ ಇಲ್ಲಃ</u>**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**Sd/-**
(ನಿತಿನ್ ಕುವೆಲ್ಲೊರಿ)
2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು

# 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಮಾಲೂರು

ಸಿ.ಸಿ. ನಂ. 1108/2023

| | | |
|---|---|---|
| ಹೆಸರುಃ | ಎಂ. ಮುನಿರಾಜು | ಚಾಸಾ-4 ಪ್ರಾಸಾ-3 |
| ತಂದೆಯ ಹೆಸರುಃ | ಮುನಿವೀರಪ್ಪ | ಸಾಕ್ಷಿಯನ್ನು ದಿಃ 09.07.2026 ರಂದು ಪ್ರಮಾಣೀಕರಿಸಲಾಯಿತು. |
| ವಯಸ್ಸುಃ | 66 ವರ್ಷ | |
| ಉದ್ಯೋಗಃ | ಸ್ಟ್ಯಾಂಪೆಂಟರ್ | |
| ವಾಸಸ್ಥಳಃ | ಚನ್ನಕಲ್ | |

## ಮುಖ್ಯ ವಿಚಾರಣೆಃ ಮಾನ್ಯ ಎಪಿಪಿ ರವರಿಂದಃ

ನನಗೆ ಆರೋಪಿ 1 ರಿಂದ 9 ರವರು ಪರಿಚಯವಿದ್ದು, ಅವರನ್ನು ನೋಡಿದರೆ ಗುರುತಿಸುತ್ತೇನೆ.

2023 ನೇ ಇಸವಿಯಲ್ಲಿ ನನ್ನ ಮನೆಯ ಮುಂದೆ ನನಗೂ ಹಾಗೂ 1 ರಿಂದ 9 ಜನ ಆರೋಪಿತರಿಗೂ ಜಗಳವಾಗುತ್ತಿದ್ದು, ನಂತರ 112 ಇಂದ ಪೊಲೀಸರು ಬಂದು ವಿಚಾರ ಮಾಡಲಾಗಿ, ಆರೋಪಿತರು ಅವಾಚ್ಯ ಶಬ್ದಗಳಿಂದ ಏಕ ವಚನದಲ್ಲಿ ಬೈದು, ಅವರನ್ನು ಅಡ್ಡಹಾಕಿ ಬೆದರಿಸಿರುತ್ತಾರೆ. ನಂತರ ಅವರಿಗೆ ಕರೆಬಂದ ಮೇರೆಗೆ ಅವರು ಹೋಗಲು ಹೊರಟಾಗ, ಆರೋಪಿ 1 ರಿಂದ 9 ರವರು ಅವರನ್ನು ಅಡ್ಡಗಟ್ಟಿ, ಆರೋಪಿ ರವರು ಪೊಲೀಸರ ಜೀಪನ್ನು ಜಖಂ ಮಾಡಲು ಪ್ರಯತ್ನಪಟ್ಟರು. ನಾನು, ಚಾಸಾ.5 ಹಾಗೂ ನಮ್ಮ ಊರಿನ ಜನ ಸೇರಿ ಅವರನ್ನು ಬಿಡಿಸಿ ಕಳುಹಿಸಿರುತ್ತೇವೆ. ಈ ವಿಚಾರವನ್ನು ನಾನು ಪೊಲೀಸರ ಮುಂದೆ ತಿಳಿಸಿರುತ್ತೇನೆ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ.ಎಂ.ಎನ್ ವಕೀಲರಿಂದಃ

ಆರೋಪಿ 1 ನನ್ನ ಮಾವನ ಮಗಳು ಎಂದರೆ ಸರಿ. ಆರೋಪಿ 2 ರವರು ನನ್ನ ಮಾವ ಕೃಷ್ಣಪ್ಪ ರವರ ಮೊಮ್ಮಗ ಎಂದರೆ ಸರಿ. ಆರೋಪಿ 3 ರವರು ನಮ್ಮ ಮಾವನ ಹೆಂಡತಿ ಎಂದರೆ ಸರಿ. ಆರೋಪಿ 4 ನನ್ನ ಮಾವನ ಸೊಸೆ

ಎಂದರೆ ಸರಿ. ಆರೋಪಿ 5 ನನ್ನ ಮಾವನ ಮೊಮ್ಮಗಳು ಎಂದರೆ ಸರಿ. ಆರೋಪಿ 6 ನನ್ನ ಮಾವನ ಮೊಮ್ಮಗನ ಹೆಂಡತಿ ಎಂದರೆ ಸರಿ. ಆರೋಪಿ 7 ನನ್ನ ತಾಯಿಯ ತಮ್ಮ ಎಂದರೆ ಸರಿ. ಆರೋಪಿ 8 ನನ್ನ ಮಾವನ ಮಗಳು ಎಂದರೆ ಸರಿ. ಆರೋಪಿ 9 ನನ್ನ ಮಾವನ ಮಗಳ ಗಂಡ ಎಂದರೆ ಸರಿ.

ನನ್ನ ತಾಯಿಯನ್ನು ಅರಳೇರಿ ಗ್ರಾಮಕ್ಕೆ ಮದುವೆ ಮಾಡಿ ಕೊಟ್ಟಿರುತ್ತಾರೆ. ನನ್ನ ತಾಯಿ ಅವರ ತಂದೆಯ ಮನೆಗೆ ವಾಪಸ್ಸಾಗಿ ಸುಮಾರು 70 ವರ್ಷವಾಗಿರುತ್ತದೆ. ಈಗಲೂ ನನ್ನ ತಾಯಿ ಹಾಗೂ ನಾವು ನನ್ನ ತಾಯಿಯ ತವರು ಮನೆಯಲ್ಲಿ ವಾಸವಾಗಿದ್ದೇವೆ. ಆ ಮನೆಯ ಒಂದು ಭಾಗದಲ್ಲಿ ನಾನು ವಾಸವಾಗಿದ್ದೇನೆ ಎಂದರೆ ಸರಿ. ಅದೇ ಮನೆಯಲ್ಲಿ ಒಂದು ಗೋಡೆಯನ್ನು ಹಾಕಿಕೊಂಡು ಆರೋಪಿ 7 ರವರು ವಾಸವಾಗಿದ್ದಾರೆ ಎಂದರೆ ಸರಿ. ನನ್ನ ತಾಯಿ ಆಸ್ತಿಯನ್ನು ಕೇಳಿಕೊಂಡು ದಾವೆಯನ್ನು ಹೂಡಿದ್ದು, ಅದು ವಜಾ ಆಗಿ ಅಪೀಲು ದಾವೆ ಸಲ್ಲಿಸಲಾಗಿದೆ ಎಂದರೆ ಸರಿ. ಮನೆಯ ಖಾತೆ ವಿಚಾರದಲ್ಲಿ ಖಾತೆಯನ್ನು ಸೃಷ್ಟಿ ಮಾಡಿಕೊಂಡಿದ್ದೀರಿ ಎಂಬ ವಿಷಯಲ್ಲಿ ಹಲವಾರು ಬಾರಿ ನಮ್ಮ ಹಾಗೂ ಆರೋಪಿ 7 ರವರ ನಡುವೆ ಜಗಳವಾಗಿರುತ್ತದೆ ಎಂದರೆ ಸರಿ. ಆ ವಿಚಾರ ಬಾಬ್ತು ಸಿವಿಲ್ ದಾವೆ ನಡೆಯುತ್ತಿದೆ ಎಂದರೆ ಸರಿ. ಹಲವಾರು ಬಾರಿ ಈ ಖಾತೆಯ ವಿಚಾರವಾಗಿ ಆರೋಪಿ 7 ರವರ ವಿರುದ್ದ ದಾವೆ ಸಲ್ಲಿಸಿ ತೊಂದರೆ ನೀಡುತ್ತಿದ್ದೆ ಎಂದರೆ ಸರಿಯಲ್ಲ.

ನನ್ನ ಹಾಗೂಾ ಆರೋಪಿತರ ನಡುವೆ ರಾತ್ರಿ ಸುಮಾರು 9.00 ಗಂಟೆಗೆ ಜಗಳ ಪ್ರಾರಂಭವಾಗಿರುತ್ತದೆ. ಸದರಿ ಗಲಾಟೆಯ ಸಮಯದಲ್ಲಿ ಸುಮಾರು 10 ರಿಂದ 15 ಜನ ಹಾಜರಿರುತ್ತಾರೆ. ಅವರ ಪರಿಚಯ ನನಗಿದ್ದು, ಅವರ ಹೆಸರುಗಳನ್ನು ಹೇಳಬಲ್ಲೆ. ಕತ್ತಲೆಯಾದ ಕಾರಣ ನನಗೆ ಸಂಕ್ಷಿಪ್ತವಾಗಿ ಯಾರು ಆ ಗಲಾಟೆಯ ಸಮಯದಲ್ಲಿ ಇದ್ದರು ಎಂಬುದನ್ನು ಹೇಳಲು ಸಾಧ್ಯವಿಲ್ಲ. ಗಲಾಟೆಯ ಕಾಲಕ್ಕೆ ಯಾರು ಪೊಲೀಸರಿಗೆ ಕರೆ ಮಾಡಿದ್ದರು ಎಂಬ ವಿಷಯ ನನಗೆ ತಿಳಿದಿಲ್ಲ. ಇಬ್ಬರು ಪೊಲೀಸರು ಘಟನೆ ಕಾಲಕ್ಕೆ ಬಂದಿರುತ್ತಾರೆ, ಅವರ ಹೆಸರು ನನಗೆ ಗೊತ್ತಿಲ್ಲ. ಆರೋಪಿತರು ಕಲ್ಲುಗಳು, ದೊಣ್ಣೆ ಹಿಡಿದು ಪೊಲೀಸ್

ಜೀಪನ್ನು ಜಖಂಗೊಳಿಸಲು ಪ್ರಯತ್ನಪಟ್ಟರು. ಅದನ್ನು ನಾವು ಹಾಗೂ ಊರಿನವರು ಸೇರಿ ತಡೆದು ಸಮಾಧಾನಪಡಿಸಿರುತ್ತೇವೆ, ಆ ಸಮಯದಲ್ಲಿ ನಮ್ಮ ಊರಿನವರು 15 ಜನ ಇದ್ದು, ಯಾರು ಎಂದು ನನಗೆ ಹೇಳಲು ಸಾಧ್ಯವಿಲ್ಲ.

ಘಟನೆಯ ಸಮಯದಲ್ಲಿ ಪೊಲೀಸರು ಸ್ಥಳಕ್ಕೆ ಬಾರದಿದ್ದರೂ, ಯಾವುದೇ ವಾಹನಕ್ಕೆ ಆರೋಪಿತರು ಅಡ್ಡಿಪಡಿಸದಿದ್ದರೂ ಪೊಲೀಸರ ಜೊತೆ ಶಾಮೀಲಾಗಿ ಸುಳ್ಳು ದಾವೆಯನ್ನು ಸಲ್ಲಿಸಿ ಈ ರೀತಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪೊಲೀಸರಿಗೆ ಗಲಾಟೆಯ ವಿಷಯದಲ್ಲಿ ಹೇಳಿಕೆಯನ್ನು ನೀಡಿದ್ದೇನೆ. ನಾನು 2023 ನೇ ಇಸವಿಯಲ್ಲಿ ಹೇಳಿಕೆಯನ್ನು ನೀಡಿದ್ದೇನೆ, ಆದರೆ ಯಾವ ದಿನ ಹೇಳಿಕೆಯನ್ನು ನೀಡಿದ್ದೇನೆ ಎಂದು ನನಗೆ ನೆನಪಿಲ್ಲ. ಪೊಲೀಸರ ಮುಂದೆ ಹೇಳಿಕೆ ನೀಡದಿದ್ದರೂ, ಈ ರೀತಿ ಸುಳ್ಳು ದಾಖಲೆ ಸೃಷ್ಟಿ ಮಾಡಿ, ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ರೀತಿ ತಪ್ಪು ಮಾಡದೇ ಇದ್ದರೂ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲಃ**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆ ಮೇರೆಗೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**Sd/-**
(ನಿತಿನ್ ಕುವೆಲ್ಲೊ)
2 ನೇ ಅಪರ ಸಿ.ಜೆ. ಮತ್ತು ಜೆಎಂಎಫ್ ಸಿ
ಮಾಲೂರು